ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) : ಮಾನ್ಯ ಅಧ್ಯಕ್ಷರೆ, ವಿಧಾನ ಸಭಾ ಸದಸ್ಯರಾದ ಮಾನ್ಯ ಚಿಕ್ಕಣ್ಣನವರು ಮಂಡಿಸಿರುವ ಹಕ್ಕುಚ್ಯುತಿ ಸೂಚನೆ ಬಗ್ಗೆ ಹಾಗೂ ಡಾ॥ ಹೆಚ್.ಸಿ. ಮಹದೇವಪ್ಪ ರವರು ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಗಮನ ಸೆಳೆದಿರುವ ವಿಚಾರಗಳ ಬಗ್ಗೆ ಹೇಳಿರುವ ಎಲ್ಲ ಮಾತುಗಳ ಬಗ್ಗೆ ವಿವರವಾದ ವರದಿಯನ್ನು ಜಿಲ್ಲಾಧಿಕಾರಿಗಳಿಂದ ತರಿಸಿ, ತಮಗೆ ಮಾಹಿತಿಯನ್ನು ಸಲ್ಲಿಸುತ್ತೇನೆಂದು ಹೇಳುವುದಕ್ಕೆ ಬಯಸುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು : ದಯವಿಟ್ಟು ಕುಳಿತುಕೊಳ್ಳಿ

(ಗೊಂದಲ)

ಮಾನ್ಯ ಸದಸ್ಯರು : ಈ ಸಂಬಂಧ ಕ್ರಮ ಕೈಗೊಳ್ಳಿ

(ಗೊಂದಲ)

ಶ್ರೀ ಸಿ.ಎಂ. ಉದಾಸಿ : ಕ್ರಮ ಕೈಗೊಳುವುದು ಬೇರೆ. ಕ್ರಮ ಕೈಗೊಳ್ಳವುದು ಅಧ್ಯಕ್ಷರು.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಇದು ಶಾಸಕರ ಗೌರವದ ಪ್ರಶ್ನೆ. ಅವರ ಹಕ್ಕಿನ ಪ್ರಶ್ನೆ ನೀವು ಇವರನ್ನು ರಕ್ಷಣೆ ಮಾಡಬೇಕು.

(ಗೊಂದಲ)

(ಈ ಹಂತದಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಶಾಸಕರು ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದರು)

(ಗೊಂದಲ)

ಅಧ್ಯಕ್ಷರು : ದಯವಿಟ್ಟು ನೀವು ಹೋಗಿ, ಇನ್ನೂ ಎನೂ ತೀರ್ಮಾನವನ್ನೆ ಮಾಡಿಲ್ಲ. ನಾನೇನು ತೀರ್ಮಾನವನ್ನೇ ಕೊಟ್ಟಿಲ್ಲ. ನೀವು ಅಷ್ಟು ಬೇಗ ಸದನದ ಬಾವಿಗೆ ಬಂದರೆ ಹೇಗೆ?

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ಈ ಘಟನೆ ನಡೆದು ಒಂದು ವಾರವಾಗಿದೆ.

(ಗೊಂದಲ)

ಅಧ್ಯಕ್ಷರು : ಒಂದು ವಾರ ಆಗಿಲ್ಲ. 21ನೇ ತಾರೀಖು ಆಗಿರುವುದು.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಮಾನ್ಯ ಶಾಸಕರು ಅವರ ಕ್ಷೇತ್ರದಲ್ಲಿ ಹೇಗೆ ಮುಖ ತೋರಿಸುತ್ತಾರೆಂದು ಹೇಳಿ ?

(ಗೊಂದಲ)

ಶ್ರೀ ಅಶೋಕ ಮಹದೇವಪ್ಪ ಪಟ್ಟಣ : ತಕ್ಷಣ ಆ ಅಧಿಕಾರಿಯನ್ನು ಸಸ್ಪೆಂಡ್ ಮಾಡಬೇಕು.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಇದು ಅವರಿಬ್ಬರ ಮಧ್ಯೆ ನಡೆದಿರುವ ಘಟನೆಯಲ್ಲ. ಮಾಧ್ಯಮದವರ ಎದುರಿಗೆ ನಡೆದಿರುವುದು. ಅವರು ಅವರ ಕ್ಷೇತ್ರಕ್ಕೆ ಹೇಗೆ ಮುಖ ತೋರಿಸಬೇಕು ಹೇಳಿ? ಈ ರೀತಿ ಮಾಡಿದರೆ ಹೇಗೆ?

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ಸಸ್ಪೆಂಡ್ ಮಾಡಿ

(ಗೊಂದಲ)

ಅಧ್ಯಕ್ಷರು : Refer ಮಾಡುತ್ತೇನೆ.

(ಗೊಂದಲ)

ಅಧ್ಯಕ್ಷರು : ದಯವಿಟ್ಟು ಎಲ್ಲಾ ತಮ್ಮ ಸೀಟಿಗೆ ಹೋಗಿ,

(ಗೊಂದಲ)

ಶ್ರೀ ಸಿದ್ದರಾಮಯ್ಯ : ಮೊದಲು ಅವರನ್ನು ಸಸ್ಪೆಂಡ್ ಮಾಡಿಸಿ. ಅವರು ಎಂಥದೋ ಯೋಜನಾ ನಿರ್ದೇಶಕಿಯಾಗಿ, ಎಂ.ಎಲ್.ಎ. ಗಳು ಅವರ ಕಛೇರಿಗೆ ಹೋಗಿದ್ದಾರೆ. ಶಾಸಕರೇನು ಅವರ ಮನೆಗೆ ಏನಾದರೂ ಹೋಗಿದ್ದರಾ?

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ಅಧಿಕಾರಿಗಳಿಂದ ಎಲ್ಲಾ ಕಡೆ ಇದೇ ರೀತಿಯಾಗುತ್ತಿದೆ. ಏನಾದರೂ ಕ್ರಮ ಕೈಗೊಳ್ಳಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : This is too much. ಮೊದಲು ಸಸ್ಪೆಂಡ್ ಮಾಡಲಿ ನ್ಯಾಯಾಲಯಕ್ಕೆ ನಂತರ ಹೋಗಲಿ, ಅದನ್ನು ಆಮೇಲೆ ಕೂಡ ತಡೆಯುವುದಕ್ಕಾಗುವುದಿಲ್ಲ. ಮಾನ್ಯ ಅಧ್ಯಕ್ಷರೆ, ದಯಮಾಡಿ ಇದು ಶಾಸಕರ ಗೌರವದ ಪ್ರಶ್ನೆ ಅವರು ಅವರ ಕ್ಷೇತ್ರದಲ್ಲಿ ಹೇಗೆ ಮುಖ ತೋರಿಸುತ್ತಾರೆ ಹೇಳಿ ನೋಡೋಣ?

(ಗೊಂದಲ)

ಅಧ್ಯಕ್ಷರು : Refer ಮಾಡುತ್ತೇನೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಒಬ್ಬ ಅಧಿಕಾರಿ ಮಾಧ್ಯಮದವರ ಮುಂದೆ ಎಲ್ಲಿಯವರೆಗೆ ಹೇಳುತ್ತಾರೆಂದರೆ ಶಾಸಕರೇ ನೀವು ಭ್ರಷ್ಟರು ಎಂದು ಹೇಳುತ್ತಾರೆ. ಕುಡಿದು ಬಂದಿದ್ದೀರಿ, ನೀವು' ಎಂದು ಹೇಳುತ್ತಾರೆ. This is too much. ಸರ್ಕಾರ ಇಂತಹವರನ್ನು ರಕ್ಷಣೆ ಮಾಡುವುದಕ್ಕಾಗುವುದಿಲ್ಲ.

(ಗೊಂದಲ)

ಅಧ್ಯಕ್ಷರು : ದಯಮಾಡಿ ತಾವುಗಳು ಮೊದಲು ತಮ್ಮ ಸ್ಥಾನಗಳಿಗೆ ಹೋಗಿ.

(ಗೊಂದಲ)

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) : ಮಾನ್ಯ ಅಧ್ಯಕ್ಷರೆ, ನಾನು ಈಗಲೇ ಸೂಚನೆಯನ್ನು ಕೊಟ್ಟು ವರದಿ ತರಿಸಿ ನಾಳೆಯೇ ಕ್ರಮ ಕೈಗೊಳ್ಳುತ್ತೇನೆ.

(ಗೊಂದಲ)

ಅಧ್ಯಕ್ಷರು : ಪ್ಲೀಸ್, ನಿಮ್ಮ ನಿಮ್ಮ ಸ್ಥಾನಗಳಿಗೆ ಹೋದರೆ ಅವರು ಏನು ಹೇಳಿಕೆ ಕೊಡುತ್ತಾರೆಂದು ತಿಳಿಯುತ್ತದೆ.

(ಗೊಂದಲ)

ಶ್ರೀ ಸಿ.ಎಂ. ಉದಾಸಿ : ನೀವು ಕೊಟ್ಟಿರುವಂತಹ ಮಾಹಿತಿಗಳ ಪ್ರಕಾರ ಕ್ರಮ ಕೈಗೊಳ್ಳುವುದರಲ್ಲಿ ಎರಡು ಮಾತಿಲ್ಲ. ಅದರೆ ಜಿಲ್ಲಾಧಿಕಾರಿಗಳಿಂದ ವರದಿ ತರಿಸದೇ ಕ್ರಮ ಕೈಗೊಂಡಲ್ಲಿ. ಪುನಃ ಅದನ್ನು

ಎಲ್ಲಿ ಪ್ರಶ್ನಿಸುವುದಕ್ಕೆ ಅವಕಾಶವಾಗುತ್ತದೆಂಬ ಉದ್ದೇಶದಿಂದ, ನಾಳೆ ಸದನ ಪ್ರಾರಂಭವಾಗುವ ಪೂರ್ವದಲ್ಲೇ ವರದಿಯನ್ನು ತರಿಸಿ ಅಗತ್ಯ ಕ್ರಮ ಕೈಗೊಳ್ಳುತ್ತೇವೆ. ಕ್ರಮ ಕೈಗೊಳ್ಳುವುದರಲ್ಲಿ ಎರಡು ಮಾತಿಲ್ಲ.

(ಗೊಂದಲ)

ಅಧ್ಯಕ್ಷರು : ನಾಳೆ ಬೆಳಿಗ್ಗೆ ವರದಿ ತಂದು ಪ್ರಶ್ನೋತ್ತರ ಆದ ಕೂಡಲೇ ಮಾಹಿತಿ ಕೊಡಬೇಕು.

(ಈ ಹಂತದಲ್ಲಿ ಧರಣಿ ನಿಂತ ಸದಸ್ಯರೆಲ್ಲರೂ ತಮ್ಮ ಸ್ಥಾನಗಳಿಗೆ ಹಿಂದಿರುಗಿದರು)

ಅಧ್ಯಕ್ಷರು : ನಿಯಮ 69 ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ ಈಗಾಗಲೇ ಚರ್ಚೆ ಮುಗಿದಿದೆ. ಮಾನ್ಯ ಸದಸ್ಯರೆಲ್ಲರೂ ಮಾತನಾಡಬೇಕೆಂದು ಹೇಳುತ್ತಾರೆ. ಮಾನ್ಯ ಶ್ರೀರಾಮುಲು ಅವರು ಮಾತನಾಡಿ. ಸದಸ್ಯರೆಲ್ಲರೂ 10 ನಿಮಿಷಗಳ ಕಾಲಾವಧಿ ಮಾತ್ರ ತೆಗೆದುಕೊಳ್ಳಬೇಕು. ಸಹಕರಿಸಿ, ಗಮನ ಸೆಳೆಯುವುದನ್ನು ಆಮೇಲೆ ತೆಗೆದುಕೊಳ್ಳೋಣ.

7. ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವ ವಿಷಯದ ಮೇಲೆ ಮುಂದುವರೆದ ಚರ್ಚೆ :

ವಿಷಯ : ರಾಜ್ಯದಲ್ಲಿ ಬರ ಪರಿಸ್ಥಿತಿಯ ಬಗ್ಗೆ

ಶ್ರೀ ಬಿ. ಶ್ರೀರಾಮುಲು (ಬಳ್ಳಾರಿ) : ಮಾನ್ಯ ಸಭಾಧ್ಯಕ್ಷರೆ, ರಾಜ್ಯದಲ್ಲಿ ಅತ್ಯಂತ ಘೋರವಾದಂತಹ ಬರಗಾಲ ಪರಿಸ್ಥಿತಿ ಬಂದಿದೆ. ಇದಕ್ಕಾಗಿ ಸರ್ಕಾರವು ನಾಯಕತ್ವದ ಬದಲಾವಣೆಯ ಗೊಂದಲದಲ್ಲಿ ಮುಳುಗಿರುವಂತಹ ಸಂದರ್ಭದಲ್ಲಿ ಇಡೀ ಕರ್ನಾಟಕ ರಾಜ್ಯದಲ್ಲಿ ಬರಗಾಲವೇನು ಬಂದಿತ್ತೋ, ಜನರು ಸಂಕಷ್ಟದಲ್ಲಿ ಏನಿದ್ದರೋ, ಅಂತಹ ಸಂದರ್ಭದಲ್ಲಿ ರಾಜ್ಯ ಸರ್ಕಾರವಾಗಿರಬಹುದು, ಕೇಂದ್ರ ಸರ್ಕಾರವಾಗಿರಬಹುದು. ಬರ ಪರಿಹಾರ ಕೊಡುವ ವಿಷಯದಲ್ಲಿ ಸಂಪೂರ್ಣವಾಗಿ ವಿಫಲವಾಗಿದೆಯೆಂದು ತಮ್ಮ ಮೂಲಕ ಸದನಕ್ಕೆ ತಿಳಿಸಬಯಸುತ್ತೇನೆ. ಜನರು ಕಷ್ಟದಲ್ಲಿರುವಂತಹ ಸಂದರ್ಭದಲ್ಲಿ ಕೇಂದ್ರ